‘ಆಚಾರಧರ್ಮ’ ಗ್ರಂಥಮಾಲಿಕೆ : ಸಾತ್ತ್ವಿಕ ಆಭರಣ - ಖಂಡ ೧

# ಆಭರಣಗಳ ಮಹತ್ವ

(Importants of Ornaments)

ಕನ್ನಡ (Kannada)


**ಸಂಕಲನಕಾರರು**

ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷ ಮಾಡುವ

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**



(‘ಸಚ್ಚಿದಾನಂದ ಪರಬ್ರಹ್ಮ’ ಬಿರುದಿನ ಸ್ಪಷ್ಟೀಕರಣವನ್ನು ‘ಪುಟ ೧೪’ ರಲ್ಲಿ ಓದಿ.)



**ಸೂಕ್ಷ್ಮಜ್ಞಾನ ಪಡೆದವರು**

**ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ**

**ಸೌ. ರಂಜನಾ ಗೌತಮ ಗಡೇಕರ**

**ಶ್ರೀ. ವಿಶಾಲ ರಮೇಶ ಪವಾರ ಮತ್ತು ಇತರರು**



**ಸನಾತನ ಸಂಸ್ಥೆ**


**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ವಿ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಜಾಹ್ನವಿ ಶಿಂದೆ ಮತ್ತು ಕು. ಭಾವಿನಿ ಕಪಾಡಿಯಾ

'ಆಭರಣಗಳ ಶಾಸ್ತ್ರ' ಈ ಮೂಲ ಖಂಡದ (ಮೊದಲ ಆವೃತ್ತಿ : 16.3.2010) ಎರಡು ಆವೃತ್ತಿಗಳು ಪ್ರಕಾಶಿತಗೊಂಡಿವೆ. ಈ ಮೂಲ ಖಂಡವನ್ನು ಆಗಸ್ಟ್ 2015 ರಲ್ಲಿ 'ಆಭರಣಗಳ ಮಹತ್ವ' ಮತ್ತು 'ಸ್ತ್ರೀ–ಪುರುಷರ ಆಭರಣಗಳು' ಎಂಬ ಎರಡು ಖಂಡಗಳಲ್ಲಿ ವಿಭಜಿಸಲಾಗಿದೆ.

**First Edition** : Shree Chamundeshwari Jayanthi,
Kaliyug Varsh 5117 (7th August 2015)

**Second Edition** : ShriKrishna Jayanti, Kaliyug Varsh 5124
(18th August 2022)

Translated from the original Marathi text 'Alankaranche Mahatva'.
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ ಮತ್ತು ಗುಜರಾತಿ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಸೌ. ಪ್ರಜ್ಞಾ ಸುಧೀಂದ್ರ ರಾವ್
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು 560 010.

**ದೇಣಿಗೆ ಮೌಲ್ಯ** : ₹ 75/-

**ISBN** : 978-93-92952-00-5

ॐ ಗ್ರಂಥ ಕ್ರ. : 127

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ವಿಷಯಸೂಚಿ


೧. ಗ್ರಂಥದ ಸಂಕಲನಕಾರರ ಪರಿಚಯ ೬

೨. ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ ! ೯

೩. ಮನೋಗತ ೧೦

೪. ಆಭರಣಗಳನ್ನು ಖರೀದಿಸುವಾಗ ವಹಿಸಬೇಕಾದ ಕಾಳಜಿ ೧೩


## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. 'ಆಭರಣ' ಎಂಬ ಶಬ್ದದ ಉತ್ಪತ್ತಿ ಮತ್ತು ಅರ್ಥ ೧೫

೨. ಆಭರಣದ ಕೆಲವು ಸಮಾನಾರ್ಥಕ ಶಬ್ದಗಳು ೧೫

೩. ಆಭರಣಗಳ ನಿರ್ಮಿತಿ ೧೫

೪. ಈಶ್ವರನ ಗುಣಗಳೆಂದರೆ ಸೂಕ್ಷ್ಮ ಆಭರಣಗಳು ೧೬

೫. ವೈರಾಗ್ಯರೂಪೀ ಆಭರಣ (ಬ್ರಹ್ಮದರ್ಶಕ ಗುಣಸ್ವರೂಪೀ ಆಭರಣ) ೧೮

೬. ಬ್ರಹ್ಮಾಂಡದ ಆಭರಣ : ಶಿವಧ್ಯಾನ ೧೯

೭. ದೇವತೆಗಳು, ಮನುಷ್ಯರು ಮತ್ತು ಆಭರಣಗಳು ೨೦

* ಕೆಲವು ಆಭರಣಗಳು, ಅವುಗಳಲ್ಲಿ ಕಾರ್ಯನಿರತವಾಗಿರುವ ತತ್ತ್ವ ಮತ್ತು ಸಂಬಂಧಿತ ದೇವತೆಗಳು ೨೪

* ದೇವತೆಗಳ ಆಭರಣಗಳು ಮತ್ತು ಅವುಗಳಿಂದ ಮನುಷ್ಯನಿಗಾಗುವ ಉಪಯೋಗ ೨೫

೮. ಯುಗಗಳಿಗನುಸಾರ ಆಭರಣಗಳಲ್ಲಾದ ಬದಲಾವಣೆಗಳು ೨೬

೯. ಆಭರಣಗಳ ವೈಶಿಷ್ಟ್ಯಗಳು ೨೮

೧೦. ಆಭರಣಗಳನ್ನು ಉಪಯೋಗಿಸುವುದರ ಹಿಂದಿನ ಉದ್ದೇಶ ಮತ್ತು ಮಹತ್ವ ೩೦

* ಆಭರಣಗಳನ್ನು ಧರಿಸುವುದರಿಂದ ದೇವತೆಗಳ ಲಹರಿಗಳನ್ನು ಗ್ರಹಿಸಲು ಸಾಧ್ಯವಾಗುತ್ತದೆ ೩೨

* ಆರತಿಯನ್ನು ಬೆಳಗುವಾಗ ಆಭರಣಗಳನ್ನು ಉಪಯೋಗಿಸುವುದರ ಮಹತ್ವ ೩೪

* ದೇವತೆಗಳಿಗೆ ಅರ್ಪಿಸಿದ ಆಭರಣಗಳನ್ನು ಧರಿಸುವುದರಿಂದ ದೇವತೆಗಳ ಶಕ್ತಿ ಮತ್ತು ಚೈತನ್ಯವು ಸಿಗುತ್ತದೆ ೩೫

**೧೧. ಆಭರಣಗಳ ಲೋಹ (ಧಾತು) ಮತ್ತು ಅವುಗಳಲ್ಲಿ ಅಳವಡಿಸಿದ ರತ್ನಗಳು ೪೯**

* ಆಭರಣಗಳಲ್ಲಿ ಅಳವಡಿಸಿರುವ ವಿವಿಧ ರತ್ನಗಳಿಂದ ಶರೀರದ ಮೇಲಾಗುವ ಪರಿಣಾಮಗಳು ೫೫

**卐 ‘ಆಭರಣಗಳ ಮಹತ್ವ’ ಈ ವಿಷಯದ ಹೆಚ್ಚು ಸೂಕ್ಷ್ಮ-ಸ್ತರದಲ್ಲಿನ ಅಧ್ಯಾತ್ಮಶಾಸ್ತ್ರೀಯ ಜ್ಞಾನ ೫೮**

**卐 ‘ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೬೦**

## ಈಶ್ವರನ ಸಂಕಲ್ಪದಿಂದ ನಿರ್ಮಿತವಾದ ಮತ್ತು ಮನುಕುಲದ ಉದ್ಧಾರ ಮಾಡುವ ಸನಾತನದ ಗ್ರಂಥಗಳು !

೧. ‘ಜ್ಞಾನ ನೀಡುವವರು ‘ಗುರು’ ! ಸನಾತನದ ಗ್ರಂಥವನ್ನು ಓದಿದ ನಂತರ ನನಗೆ ‘ಗ್ರಂಥವೇ ಗುರುವಾಗಿದೆ !’ ಎಂಬ ವಚನದ ಅನುಭವವಾಯಿತು.

೨. ‘ಜ್ಞಾನಗುರು’ಗಳಾಗಿರುವ ಪರಾತ್ಪರ ಗುರು ಡಾ. ಆಠವಲೆಯವರು ಸಂಕಲನ ಮಾಡಿರುವ ಗ್ರಂಥಗಳು ಕೂಡ ಜ್ಞಾನದ ಭಂಡಾರವಾಗಿವೆ !

೩. ಶ್ರೀಮದ್ಭಗವದ್ಗೀತೆ, ಮಹಾಭಾರತದಂತಹ ಗ್ರಂಥಗಳು ಈಶ್ವರನ ವಾಣಿಯಿಂದ ಸಾಕಾರಗೊಂಡಿವೆ; ಆದುದರಿಂದ ಅವು ಚೈತನ್ಯದಾಯಕವಾಗಿವೆ. ಸನಾತನದ ಗ್ರಂಥಗಳೂ ಈಶ್ವರನ ಸಂಕಲ್ಪದಿಂದ ನಿರ್ಮಿತವಾಗಿವೆ. ‘ಕಲಿಯುಗದ ವೇದ’ಗಳಾಗಿರುವ ಈ ಗ್ರಂಥಗಳು ಚೈತನ್ಯದ ಸ್ರೋತಗಳಾಗಿವೆ.

೪. ಸನಾತನದ ಚೈತನ್ಯಮಯ ಗ್ರಂಥಸಂಪತ್ತಿನಿಂದ ವಾಸ್ತುವಿನಲ್ಲಿ ಸಾತ್ತ್ವಿಕತೆಯು ನಿರ್ಮಾಣವಾಗಿ ವಾಸ್ತುವು ಶುದ್ಧವಾಗುತ್ತದೆ.

೫. ಸನಾತನದ ಗ್ರಂಥಗಳಲ್ಲಿರುವ ಸಾಧನೆಯ ಬಗೆಗಿನ ಮಾರ್ಗದರ್ಶನವನ್ನು ಕೃತಿಯಲ್ಲಿ ತಂದು ವಾಚಕರು ಕ್ರಮೇಣ ‘ಸಾಧಕ’, ‘ಒಳ್ಳೆಯ ಸಾಧಕ’, ‘ಶಿಷ್ಯ’, ಮತ್ತು ‘ಸಂತ’ರಾಗಬಲ್ಲರು. ಹೀಗೆ ಸನಾತನದ ಗ್ರಂಥಗಳು ಮಾನವನ ಉದ್ಧಾರ ಮಾಡುವಂತಹದ್ದಾಗಿವೆ.’

**– ಪೂ. ರಮಾನಂದ ಗೌಡ, ಧರ್ಮಪ್ರಚಾರಕರು, ಸನಾತನ ಸಂಸ್ಥೆ, ಕರ್ನಾಟಕ. (೨.೯.೨೦೨೧)**

## ವಿಷಯಸೂಚಿಯಲ್ಲಿನ ಕ್ರಮಾಂಕ ೩

### ಸಾತ್ತ್ವಿಕ ಆಭರಣಗಳು ಈ ಗ್ರಂಥಮಾಲಿಕೆಯ ಮನೋಗತ

ಒಂಬತ್ತು ಗಜದ ಸೀರೆ, ಹಣೆಯ ಮೇಲೆ ಕುಂಕುಮ ಮತ್ತು ಅವುಗಳ ಜೊತೆಗೆ ಆಭರಣಗಳ ಶೃಂಗಾರ, ಇವು ಹಿಂದೂ ಸ್ತ್ರೀಯರ ಪಾರಂಪಾರಿಕ ಗುರುತುಗಳಾಗಿವೆ. ಆಭರಣವು ಹಿಂದೂ ಸಂಸ್ಕೃತಿಯ ಅಮೂಲ್ಯ ವಂಶಾಧಿಕಾರವಾಗಿದೆ. ಕಳೆದ ಅನೇಕ ಪೀಳಿಗೆಗಳು ಬಹಳ ಅಭಿಮಾನದಿಂದ ಈ ವಂಶಾಧಿಕಾರವನ್ನು ಜೋಪಾಸನೆ ಮಾಡಿವೆ. ಕಾಲ ಬದಲಾಗುತ್ತಾ ಹೋದಂತೆ ಹಿಂದೂ ಸಂಸ್ಕೃತಿಯ ಮೇಲೆ ಪಾಶ್ಚಾತ್ಯ ಸಂಸ್ಕೃತಿಯ ಆಕ್ರಮಣವಾಗತೊಡಗಿತು. ಇದರಿಂದ ಆಭರಣಗಳ ಕಡೆಗೆ ದುರ್ಲಕ್ಷ್ಯ ವಾಗತೊಡಗಿತು. ಇತ್ತೀಚೆಗೆ 'ಫ್ಯಾಶನ್'ನ ಹೆಸರಿನಲ್ಲಿ ಸ್ತ್ರೀಯರು ಬಳೆಗಳನ್ನು ಹಾಕಿಕೊಳ್ಳುವುದಿಲ್ಲ ಮತ್ತು ಕುಂಕುಮದ ಬದಲು ಟಿಕಲಿಯನ್ನು ಹಚ್ಚಿಕೊಳ್ಳುತ್ತಿದ್ದಾರೆ. ಕೆಲವರಿಗೆ ಬಂಗಾರದ ಬಳೆ (ಬಿಲವರ), ಮೂಗುತಿ (ಮೂಗುಬೊಟ್ಟು), ಕಾಲುಂಗುರ ಮುಂತಾದ ಆಭರಣಗಳನ್ನು ಧರಿಸುವುದೆಂದರೆ ಅವರು ಹಿಂದುಳಿದವರಾಗುತ್ತಾರೆ ಎಂದೆನಿಸುತ್ತದೆ ! ಅದರೊಂದಿಗೆ ಬಹಳಷ್ಟು ಜನರಲ್ಲಿ 'ಆಭರಣಗಳೆಂದರೆ ಐಶ್ವರ್ಯದ ಪ್ರದರ್ಶನವನ್ನು ಮಾಡುವ ವಸ್ತುಗಳು' ಎಂಬ ತಪ್ಪು ದೃಷ್ಟಿಕೋನವೂ ರೂಢಿಯಾಗಿದೆ. ಅಧ್ಯಾತ್ಮಶಾಸ್ತ್ರದ ದೃಷ್ಟಿಕೋನದಿಂದ 'ಆಭರಣಗಳೆಂದರೆ' 'ದೈವೀ (ದೇವರ) ಕೃಪೆಯನ್ನು ಪಡೆದುಕೊಳ್ಳಲು ಸಹಾಯ ಮಾಡುವ ವಸ್ತುಗಳು !' ಎಂಬ ದೃಷ್ಟಿಕೋನವನ್ನು ಬಿಂಬಿಸಲು ಈ ಗ್ರಂಥಮಾಲಿಕೆಯನ್ನು ರಚಿಸಲಾಗಿದೆ.

ಆಭರಣಗಳನ್ನು ಧರಿಸುವುದರಿಂದ ಈಶ್ವರನ ಶಕ್ತಿ ಮತ್ತು ಚೈತನ್ಯವು ಸಿಗುತ್ತದೆ, ಶರೀರದಲ್ಲಿನ ಕಪ್ಪು ಶಕ್ತಿಯು (ತ್ರಾಸದಾಯಕ ಶಕ್ತಿ) ಕಡಿಮೆಯಾಗುತ್ತದೆ, ಕೆಟ್ಟ ಶಕ್ತಿಗಳ ಹಲ್ಲೆಗಳಿಂದ ರಕ್ಷಣೆಯಾಗುತ್ತದೆ, ಆಭರಣಗಳನ್ನು ಧರಿಸಿದ ಅವಯವಗಳ ಮೇಲೆ ಬಿಂದು ಒತ್ತಡ ಪದ್ಧತಿಯ (ಆ್ಯಕ್ಯೂಪ್ರೆಶರ್) ಉಪಚಾರವಾಗುತ್ತದೆ. ಈ ಗ್ರಂಥದಲ್ಲಿ ಆಭರಣಗಳ ಮಹತ್ವವನ್ನು ತಿಳಿಸಿಹೇಳುವ ಅನೇಕ ದೃಷ್ಟಿಕೋನಗಳನ್ನು ಶಾಸ್ತ್ರಸಹಿತ ಹೇಳಲಾಗಿದೆ. ವಿವಿಧ ಲೋಹಗಳಿಂದ ತಯಾರಿಸಿದ ಆಭರಣಗಳ ತುಲನೆ, ಸ್ತ್ರೀಯರು, ಪುರುಷರು ಮತ್ತು ಮಕ್ಕಳು ಧರಿಸುವ ಆಭರಣಗಳು, ಆಭರಣ ಗಳ ಶುದ್ಧೀಕರಣ ಮುಂತಾದ ಶಾಸ್ತ್ರೀಯ ಮಾಹಿತಿಯನ್ನು ಸಹ ಈ ಗ್ರಂಥದಲ್ಲಿ ನೀಡಲಾಗಿದೆ. ಆಭರಣಗಳನ್ನು ಧರಿಸಿದ ಮೇಲೆ ಸೂಕ್ಷ್ಮದಲ್ಲಿ ಯಾವ ಪ್ರಕ್ರಿಯೆಯು ನಡೆಯುತ್ತದೆ ಎಂಬುದು ಸಾಮಾನ್ಯ ಜನರಿಗೆ ತಿಳಿಯುವುದಿಲ್ಲ. ಇದನ್ನು ತಿಳಿದು ಕೊಳ್ಳುವ ಕ್ಷಮತೆಯಿರುವ ಸನಾತನದ ಸಾಧಕರು ಮಾಡಿದ ಆಭರಣಗಳ 'ಸೂಕ್ಷ್ಮ ಪರೀಕ್ಷಣೆ' ಮತ್ತು 'ಸೂಕ್ಷ್ಮಚಿತ್ರಗಳು' ಈ ಗ್ರಂಥದ ಇನ್ನೊಂದು ವೈಶಿಷ್ಟ್ಯವಾಗಿದೆ.

ಚಿನ್ನದ ಸರ, ಚಿನ್ನದ ಉಂಗುರ, ಸಾತ್ತ್ವಿಕ ಮತ್ತು ಆಸುರೀ ಆಭರಣ ಮುಂತಾದವುಗಳ ಬಗ್ಗೆ ಸಾಧಕರು ಮಾಡಿದ ಸೂಕ್ಷ್ಮದಲ್ಲಿನ ಪ್ರಯೋಗಗಳಿಂದ ಆಭರಣಗಳೆಡೆಗೆ ಆಧ್ಯಾತ್ಮಿಕ ದೃಷ್ಟಿಕೋನದಿಂದ ಹೇಗೆ ನೋಡಬೇಕು ಎಂಬುದು ಕಲಿಯಲು ಸಿಗುತ್ತದೆ.

ಅಧ್ಯಾತ್ಮಶಾಸ್ತ್ರದಂತೆ ಆಭರಣಗಳ ಲಾಭವು ಸಿಗಲು ಸ್ತ್ರೀಯರು ಎಲ್ಲ ಆಭರಣಗಳನ್ನು ಧರಿಸಬೇಕೆಂದೇನಿಲ್ಲ, ತಮ್ಮ ಆರ್ಥಿಕ ಸ್ಥಿತಿಗನುಸಾರ ಮತ್ತು ಧರ್ಮಶಾಸ್ತ್ರದಲ್ಲಿ ಹೇಳಿದಂತೆ ಕೆಲವೊಂದು ಆಭರಣಗಳನ್ನು ಧರಿಸಬಹುದು. ಏಕೆಂದರೆ ಎಷ್ಟು ಆಭರಣಗಳನ್ನು ಧರಿಸಿದೆವು ಮತ್ತು ಯಾವ ಆಭರಣಗಳನ್ನು ಧರಿಸಿದೆವು ಎನ್ನುವುದಕ್ಕಿಂತ 'ಆಭರಣಗಳನ್ನು ಧರಿಸುವುದರ ಹಿಂದಿನ ಭಾವವು' ಮಹತ್ವದ್ದಾಗಿದೆ, ಯಾರಿಗೆ ಚಿನ್ನದ ಆಭರಣಗಳನ್ನು ಧರಿಸಲು ಸಾಧ್ಯವಿಲ್ಲವೋ ಅವರು ಚಿನ್ನದ ಲೇಪನದ ಅಥವಾ ಬೆಳ್ಳಿಯ ಆಭರಣಗಳನ್ನು ಅಥವಾ ಆ ರೀತಿಯ ಇತರ ಆಭರಣಗಳನ್ನು ಧರಿಸಬಹುದು. ಈಶ್ವರಪ್ರಾಪ್ತಿಗಾಗಿ ಮಾಡುವ ಒಟ್ಟು ಸಾಧನೆಯ ದೃಷ್ಟಿಯಿಂದ ನಾಮಜಪ, ಸತ್ಸೇವೆಯಂತಹ ಸಾಧನೆಗಳಿಂದಾಗುವ ಲಾಭದ ತುಲನೆಯಲ್ಲಿ ಆಭರಣಗಳಿಂದಾಗುವ ಲಾಭವು ಅತ್ಯಲ್ಪವಾಗಿದೆ. ಹೀಗಿದ್ದರೂ ಈಶ್ವರಪ್ರಾಪ್ತಿಯ ದೃಷ್ಟಿಯಿಂದ ಸಾಧನೆಯನ್ನು ಮಾಡದವರಿಗೆ ಅಥವಾ ಪ್ರಾಥಮಿಕ ಅವಸ್ಥೆಯಲ್ಲಿರುವ ಸಾಧಕರಲ್ಲಿ ಸಾತ್ತ್ವಿಕತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಆಭರಣಗಳು ವರದಾನವೇ ಆಗಿವೆ !

ಈ ಗ್ರಂಥವನ್ನು ಓದಿ ಎಲ್ಲರಲ್ಲಿ ಆಭರಣಗಳ ಕಡೆಗೆ ನೋಡುವ ಆಧ್ಯಾತ್ಮಿಕ ದೃಷ್ಟಿಕೋನವು ನಿರ್ಮಾಣವಾಗಲಿ ಮತ್ತು ಆಭರಣಗಳಂತಹ ಅಮೂಲ್ಯ ಕೊಡುಗೆಯನ್ನು ನೀಡಿದ ಹಿಂದೂ ಧರ್ಮದ ಶ್ರೇಷ್ಠತೆಯು ಗಮನಕ್ಕೆ ಬರಲೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

## ಡಾ. ಆಠವಲೆಯವರ (ಸಂಕಲನಕಾರರು) ಪ್ರತಿಯೊಂದು ವಾಕ್ಯವು 'ಬ್ರಹ್ಮವಾಕ್ಯ'ವೇ ಆಗಿದೆ !

'ಆಭರಣಗಳ ಶಾಸ್ತ್ರ' ಈ ಗ್ರಂಥಮಾಲಿಕೆಯ ನಿರ್ಮಿತಿಯ ಸಮಯದಲ್ಲಿ ನಾನು ಒಂದು ಸಂದೇಹವನ್ನು ಕೇಳಲು ಪರಾತ್ಪರ ಗುರು ಡಾಕ್ಟರರ (ಪರಾತ್ಪರ ಗುರು ಡಾ. ಆಠವಲೆ) ಬಳಿ ಹೋಗಿದ್ದೆ. ಮಾತನಾಡುವಾಗ ನಾನು ಗ್ರಂಥದ ವಿಷಯವು ನಿತ್ಯದ ಗ್ರಂಥಗಳ ವಿಷಯಕ್ಕಿಂತಲೂ ಸ್ವಲ್ಪ ಹೆಚ್ಚಿದೆ ಎಂದು ಹೇಳಿದೆ. ಆಗ ಅವರು 'ಆಭರಣ' ವಿಷಯದ ಎರಡು ಗ್ರಂಥಗಳನ್ನು ಮಾಡಬಹುದೇನು' ಎಂದು ಕೇಳಿದರು, ಆದರೆ ಎರಡು ಗ್ರಂಥಗಳನ್ನು ತಯಾರಿಸುವಷ್ಟು ವಿಷಯವು ಇರಲಿಲ್ಲ. ಆದುದರಿಂದ ನಾನು

ಏನೂ ಉತ್ತರಿಸಲಿಲ್ಲ. ಮರುದಿನ ಸಾಯಂಕಾಲ ಸಾಧಕರಿಗೆ ಈಶ್ವರೀ ಕೃಪೆಯಿಂದ ದೊರಕಿದ ಜ್ಞಾನ ಮತ್ತು ಆಭರಣಗಳ ಬಗ್ಗೆ ಮಾಡಿದ ಸೂಕ್ಷ್ಮದಲ್ಲಿನ ಪ್ರಯೋಗ ಮತ್ತು ಅನುಭೂತಿಗಳು ಸೇರಿ ಎರಡು ಗ್ರಂಥಗಳನ್ನು ನಿರ್ಮಿಸುವಷ್ಟು ವಿಷಯವು ತಯಾರಾಯಿತು. ಈ ಪ್ರಸಂಗದಿಂದ ನನಗೆ ಪರಾತ್ಪರ ಗುರು ಡಾಕ್ಟರರ ಪ್ರತಿಯೊಂದು ಮಾತು ‘ಬ್ರಹ್ಮವಾಕ್ಯ’ವೇ ಆಗಿದೆ ಎಂಬುದರ ಅನುಭವವು ಬಂದಿತು. – ಕು. ರಾಜಶ್ರೀ ಸಖದೇವ, ಗ್ರಂಥ ವಿಭಾಗ, ಸನಾತನ ಆಶ್ರಮ, ರಾಮನಾಥಿ, ಗೋವಾ.

(‘ಸ್ತ್ರೀಯರ ಆಭರಣಗಳ ಶಾಸ್ತ್ರ’ದ ಬಗ್ಗೆ ಒಂದು ಕಿರುಗ್ರಂಥ ಮತ್ತು ಮೂರು ಗ್ರಂಥಗಳು ಪ್ರಕಾಶಿತವಾಗಿವೆ.)

**ಪರಾತ್ಪರ ಗುರು ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾದ ಸದ್ಗುರು (ಸೌ.) ಬಿಂದಾ ಸಿಂಗಬಾಳ ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳ ಇವರ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ**

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳು ಸನಾತನಕ್ಕೆ ಮಾರ್ಗ ದರ್ಶನ ಮಾಡುತ್ತಾರೆ. ೧೩.೫.೨೦೨೦ ರಂದು ಸಪ್ತರ್ಷಿಗಳು, ‘ಇನ್ನು ಮುಂದೆ ಸದ್ಗುರು (ಸೌ.) ಬಿಂದಾ ಸಿಂಗಬಾಳರನ್ನು ‘ಶ್ರೀಸತ್‌ಶಕ್ತಿ (ಸೌ.) ಬಿಂದಾ ಸಿಂಗಬಾಳ’ ಮತ್ತು ಸದ್ಗುರು (ಸೌ.) ಅಂಜಲಿ ಗಾಡಗೀಳರನ್ನು ‘ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಗಾಡಗೀಳ’ ಎಂದು ಸಂಬೋಧಿಸಬೇಕು; ಏಕೆಂದರೆ ಈ ಹೆಸರುಗಳಿಂದ ಇಬ್ಬರಿಗೂ ದೇವಿತತ್ತ್ವ ಸಿಗುವುದು, ಹಾಗೆಯೇ ಆ ರೀತಿ ಉಲ್ಲೇಖಿಸುವವರಿಗೂ ಇದರ ಲಾಭವಾಗುವುದು’ ಎಂದು ಹೇಳಿದ್ದಾರೆ. ಸಪ್ತರ್ಷಿಗಳ ಆಜ್ಞೆಗನುಸಾರ ಈ ರೀತಿ ಸಂಬೋಧನೆ ಮಾಡಲಾಗುತ್ತಿದೆ. ಇವರ ಹೆಸರಿನ ಸಂಬೋಧನೆಯ ಬಗ್ಗೆ ಪರಾತ್ಪರ ಗುರು ಡಾ. ಆಠವಲೆಯವರು “‘ಶ್ರೀಸತ್‌ಶಕ್ತಿ’ಯು ಭಗವಂತನ ಶಾಶ್ವತ ಸ್ವರೂಪಕ್ಕೆ ಸಂಬಂಧಿಸಿದೆ ಮತ್ತು ‘ಶ್ರೀಚಿತ್‌ಶಕ್ತಿ’ಯು ಭಗವಂತನ ವೈಶ್ವಿಕ ಜ್ಞಾನಕ್ಕೆ ಸಂಬಂಧಿಸಿದೆ’ ಎಂದು ಹೇಳಿದರು.

**ಆಚಾರಧರ್ಮದ ಪಾಲನೆಯ ಕುರಿತಾದ ಸನಾತನದ ಗ್ರಂಥಗಳು !**

卐 **ಶಾಂತ ನಿದ್ರೆಗಾಗಿ ಏನು ಮಾಡಬೇಕು ?** 卐 **ಸ್ನಾನದ ಮೊದಲಿನ ಆಚಾರಗಳ ಶಾಸ್ತ್ರ**

卐 **ಸ್ನಾನದಿಂದ ಮುಸ್ಸಂಜೆಯವರೆಗಿನ ಆಚಾರಗಳ ಹಿಂದಿನ ಶಾಸ್ತ್ರ**